ಆಪತ್ಕಾಲದ ಸಂಜೀವಿನಿ : ಪ್ರಾಣಶಕ್ತಿವಹನ ಉಪಾಯ - ಖಂಡ ೧

# ರೋಗ ನಿವಾರಣೆಗಾಗಿ ಪ್ರಾಣಶಕ್ತಿ (ಚೇತನಾ) ವಹನ ವ್ಯೂಹದಲ್ಲಿನ ಅಡಚಣೆಗಳನ್ನು ಹೇಗೆ ಹುಡುಕಬೇಕು ?

(How to identify obstructions in the Pranashakti [Chetana] flow system for curing ailments) कन्नड (Kannada)


**ಸಂಕಲನಕಾರರು**

**ಹಿಂದೂ ರಾಷ್ಟ್ರದ ಸ್ಥಾಪನೆಯ ಉದ್ಘೋಷಕರು**

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**



**ಸನಾತನ ಸಂಸ್ಥೆ**


**卐 ಭಾರತೀಯ ಭಾಷೆಗಳಿಗನುಸಾರ ಸನಾತನದ ಗ್ರಂಥಗಳ ಸಂಖ್ಯೆ 卐**

ಮರಾಠಿ ೩೪೩, ಆಂಗ್ಲ ೨೦೧, ಕನ್ನಡ ೧೯೭, ಹಿಂದಿ ೧೯೫, ಗುಜರಾತಿ ೬೮, ತೆಲುಗು ೪೫, ತಮಿಳು ೪೩, ಬಂಗಾಲಿ ೨೯, ಮಲಯಾಳಂ ೨೪, ಒರಿಯಾ ೨೨, ಪಂಜಾಬಿ ೧೩, ನೇಪಾಳಿ ೩ ಮತ್ತು ಅಸ್ಸಾಮಿ ೨

**ಡಿಸೆಂಬರ್ ೨೦೨೩ ರವರೆಗೆ ೧೩ ಭಾಷೆಗಳಲ್ಲಿ ೩೬೪ ಗ್ರಂಥಗಳ ೯೪,೯೩,೦೦೦ ಪ್ರತಿ !**

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ವಿ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ** : ಕು. ಭಾವಿನಿ ಕಪಾಡಿಯಾ ಮತ್ತು ಸೌ. ಜಾಹ್ನವಿ ಶಿಂದೆ

‘ಪ್ರಾಣಶಕ್ತಿ (ಚೇತನಾ) ವಹನ ವ್ಯೂಹದಲ್ಲಿನ ಅಡಚಣೆಗಳಿಂದಾಗುವ ರೋಗಗಳಿಗೆ ಉಪಾಯ’ ಈ ಮೂಲ ಖಂಡವನ್ನು (ಮೊದಲ ಆವೃತ್ತಿ : 29.10.2016) ಜನವರಿ 2018 ರಲ್ಲಿ ‘ರೋಗ ನಿವಾರಣೆಗಾಗಿ ಪ್ರಾಣಶಕ್ತಿ (ಚೇತನಾ) ವಹನ ವ್ಯೂಹದಲ್ಲಿನ ಅಡಚಣೆಗಳನ್ನು ಹೇಗೆ ಹುಡುಕಬೇಕು ?’ ಮತ್ತು ‘ಪ್ರಾಣಶಕ್ತಿವಹನ ವ್ಯೂಹದಲ್ಲಿನ ಅಡಚಣೆಗಳಿಂದಾಗುವ ರೋಗಗಳಿಗೆ ಮಾಡಬೇಕಾದ ಉಪಾಯ’ ಎಂಬ ಎರಡು ಖಂಡಗಳಲ್ಲಿ ವಿಭಜಿಸಲಾಗಿದೆ.

**First Edition** : Makara Sankranti, Kaliyug Varsh 5119
(14th January 2018)

**Second Edition** : Durgashtami, Kaliyug Varsh 5120
(14th March 2019)

**Second Edition** : Shri Ganesh Jayanti, Kaliyug Varsh 5125
**Second Reprint** (13th February 2024)

Translated from the original Marathi text ‘Vikar-Nirmoolanasathi Pranshakti (Chetana) Vahan Sansthetil Adathale Kase Shodhavet ?’
ಪ್ರಸ್ತುತ ಗ್ರಂಥವು ಹಿಂದಿ ಮತ್ತು ಆಂಗ್ಲ ಭಾಷೆಗಳಲ್ಲೂ ಲಭ್ಯವಿದೆ.

**ಅನುವಾದಕರು** : ಸೌ. ಪ್ರತೀಕಾ ಪೈ, ಶ್ರೀ. ಗಣೇಶ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 85/-

**ISBN :** 978-93-87641-47-1 ॐ ಗ್ರಂಥ ಕ್ರ. : 281

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

# ಅನುಕ್ರಮಣಿಕೆ

(ಕೆಲವು ವೈಶಿಷ್ಟ್ಯಪೂರ್ಣ ಉಪಅಂಶಗಳನ್ನೂ ಕೆಳಗೆ ಕೊಡಲಾಗಿದೆ.)


**೧. ಪ್ರಾಣಶಕ್ತಿವಹನ ಉಪಾಯದ ಹಿಂದಿನ ತತ್ತ್ವ** ೧೧

೧ ಆ. ಕೈಬೆರಳುಗಳಿಂದ ಹೊರಬೀಳುವ ಪ್ರಾಣಶಕ್ತಿಯಿಂದ ರೋಗಗಳನ್ನು ದೂರಗೊಳಿಸಬಹುದು ೧೨

**೨. ಪ್ರಾಣಶಕ್ತಿವಹನ ಉಪಾಯಪದ್ಧತಿಯ ವೈಶಿಷ್ಟ್ಯಗಳು** ೧೨

**೩. ಮುದ್ರೆ ಮತ್ತು ನ್ಯಾಸ ಇವುಗಳ ವಿಷಯದಲ್ಲಿನ ಮೂಲಭೂತ ಮಾಹಿತಿ** ೧೫

**೪. 'ಪ್ರಾಣಶಕ್ತಿವಹನ ಉಪಾಯಪದ್ಧತಿ'ಗನುಸಾರ ಆಧ್ಯಾತ್ಮಿಕ ಉಪಾಯಗಳನ್ನು ಹುಡುಕುವ ಮೊದಲು ಮತ್ತು ಆಧ್ಯಾತ್ಮಿಕ ಉಪಾಯಗಳನ್ನು ಮಾಡುವ ಮೊದಲು ಕೆಟ್ಟ ಶಕ್ತಿಗಳು ಶರೀರದ ಮೇಲೆ ತಂದಿರುವ ತ್ರಾಸದಾಯಕ ಆವರಣ ತೆಗೆಯಬೇಕು!** ೧೮

**೫. ಪ್ರಾಣಶಕ್ತಿ ಪ್ರವಾಹದಲ್ಲಿನ ಅಡಚಣೆಗಳನ್ನು (ಅಡೆತಡೆಗಳನ್ನು) ಹುಡುಕುವುದು (ನ್ಯಾಸ ಮಾಡಲು ಸ್ಥಾನವನ್ನು ಹುಡುಕುವುದು)** ೨೯

೫ ಇ. ಕುಂಡಲಿನಿಚಕ್ರಗಳ ಸ್ಥಾನದಲ್ಲಿ ಬೆರಳುಗಳನ್ನು ಮೇಲಿನಿಂದ ಕೆಳಗೆ ಮತ್ತು ಕೆಳಗಿನಿಂದ ಮೇಲೆ ಒಯ್ದು ನ್ಯಾಸ ಮಾಡಲು ಸ್ಥಾನವನ್ನು ಹುಡುಕುವುದು ೩೧

**೬. ಉಪಾಯ ಮಾಡಲು ಆವಶ್ಯಕ ಮುದ್ರೆ ಮತ್ತು ನಾಮಜಪ ಹುಡುಕುವುದು** ೪೦

೬ ಆ. ಪಂಚಮಹಾಭೂತಗಳು ಮತ್ತು ಅವುಗಳಿಗೆ ಸಂಬಂಧಿಸಿದ ದೇವತೆಗಳ ನಾಮಜಪ / ಬೀಜಮಂತ್ರ, ಅಂಕಜಪ ಮತ್ತು ಮುದ್ರೆಗಳು ೪೨

೬ ಇ. ಉಚ್ಚ ದೇವತೆಗಳ ಮತ್ತು ನಿರ್ಗುಣಕ್ಕೆ ಸಂಬಂಧಿಸಿದ ನಾಮಜಪ ಮತ್ತು ಮುದ್ರೆ ೫೦

**೭. ಉಪಾಯಗಳನ್ನು ಯಾರು ಹುಡುಕಬಾರದು ?** ೫೩

**೮. ಇತರರಿಗಾಗಿ ಉಪಾಯ ಹುಡುಕುವುದು** ೫೩

**೯. ಉಪಾಯ ಹುಡುಕುವ ಸಂದರ್ಭದಲ್ಲಿನ ಸಾರ್ವತ್ರಿಕ ಸೂಚನೆ** ೬೪

**೧೦. ಉಪಾಯಗಳ ಜೊತೆಗೆ ಪ್ರತಿದಿನ ಸಾಧನೆಯನ್ನು ಮಾಡುವುದರ ಮಹತ್ವ** ೬೫

**೧೧. ಮುಂಬರುವ ಕಾಲದಲ್ಲಿ ಭೀಕರ ವಿಪತ್ತುಗಳಿಂದ ರಕ್ಷಣೆಯಾಗಲು ಸಾಧನೆ ಮಾಡುವುದು ಮತ್ತು ಭಗವಂತನ ಭಕ್ತರಾಗುವುದು ಅನಿವಾರ್ಯ !** ೬೫

**卐 'ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ' ಮತ್ತು ಇತರ ಮಾಹಿತಿ** ೬೭

# ಮನೋಗತ

## ಉಪಾಯಪದ್ಧತಿಯ ತಿರುಳು

'ಪ್ರಾಣಮಯ ಕೋಶ ಮತ್ತು ಕುಂಡಲಿನಿಚಕ್ರಗಳು ಸೇರಿ ಪ್ರಾಣಶಕ್ತಿ (ಚೇತನಾ) ವಹನ ವ್ಯೂಹವಾಗುತ್ತದೆ. ಪಂಚಪ್ರಾಣ, ಪಂಚ-ಉಪಪ್ರಾಣ ಮತ್ತು ಪಂಚ-ಕರ್ಮೇಂದ್ರಿಯಗಳು ಸೇರಿ ಪ್ರಾಣಮಯ ಕೋಶವಾಗುತ್ತದೆ. ಈ ಕೋಶವು ರಜೋಗುಣಪ್ರಧಾನವಾಗಿದ್ದು ವಾಯುರೂಪದಲ್ಲಿರುತ್ತದೆ. ಮಾನವನ ಸ್ಥೂಲದೇಹ ದಲ್ಲಿ ರಕ್ತಪರಿಚಲನ, ಶ್ವಸನ, ಪಚನ, ಮಜ್ಜೆ ಇತ್ಯಾದಿ ವಿವಿಧ ವ್ಯೂಹಗಳು ಕಾರ್ಯ ನಿರತವಾಗಿರುತ್ತವೆ. ಅವುಗಳಿಗೆ ಹಾಗೂ ಮನಸ್ಸಿಗೆ ಕಾರ್ಯವನ್ನು ಮಾಡಲು ಬೇಕಾಗುವ ಶಕ್ತಿಯನ್ನು ಪ್ರಾಣಶಕ್ತಿವಹನ ವ್ಯೂಹವು ಪೂರೈಸುತ್ತದೆ. ಅದರಲ್ಲಿ ಯಾವುದಾದರೊಂದು ಸ್ಥಳದಲ್ಲಿ ಅಡಚಣೆ (ಅಡೆತಡೆ) ಬಂದಲ್ಲಿ ಸಂಬಂಧಿತ ಇಂದ್ರಿಯದ ಕಾರ್ಯಕ್ಷಮತೆ ಕಡಿಮೆಯಾಗುವುದರಿಂದ ರೋಗಗಳು (ತೊಂದರೆಗಳು) ನಿರ್ಮಾಣವಾಗುತ್ತವೆ. ಇಂತಹ ಸಂದರ್ಭದಲ್ಲಿ ಇಂದ್ರಿಯಗಳ ಕಾರ್ಯಕ್ಷಮತೆಯನ್ನು ಸುಧಾರಿಸಲು ಆಯುರ್ವೇದಿಕ, 'ಆಲೋಪೆಥಿಕ್' ಇತ್ಯಾದಿ ಔಷಧಿಗಳನ್ನು ಎಷ್ಟೇ ತೆಗೆದುಕೊಂಡರೂ ಅದರಿಂದ ಉಪಯೋಗವಾಗುವುದಿಲ್ಲ. ಅದಕ್ಕಾಗಿ ಪ್ರಾಣಶಕ್ತಿ ವಹನ ವ್ಯೂಹದಲ್ಲಿ ನಿರ್ಮಾಣವಾದ ಅಡಚಣೆಯನ್ನು ದೂರಗೊಳಿಸುವುದೇ ಏಕೈಕ ಮಾರ್ಗವಾಗಿರುತ್ತದೆ. ನಮ್ಮ ಕೈಬೆರಳುಗಳಿಂದ ಯಾವಾಗಲೂ ಪ್ರಾಣಶಕ್ತಿಯು ಹೊರ ಬೀಳುತ್ತಿರುತ್ತದೆ. ಅದನ್ನು ಬಳಸಿ ರೋಗಗಳನ್ನು ದೂರಗೊಳಿಸುವುದೇ ಈ ಪ್ರಾಣ ಶಕ್ತಿವಹನ ಉಪಾಯಪದ್ಧತಿಯ ತಿರುಳಾಗಿದೆ. ಉಪಾಯ ಮಾಡುವ ಮೊದಲು ಪ್ರಾಣಶಕ್ತಿವಹನ ವ್ಯೂಹದಲ್ಲಿನ ಅಡಚಣೆಗಳನ್ನು ಹುಡುಕುವುದು ಆವಶ್ಯಕವಾಗಿದೆ. ಈ ಅಡಚಣೆಗಳನ್ನು ಹೇಗೆ ಹುಡುಕಬೇಕು ಮತ್ತು ಆ ಅಡಚಣೆಗಳ ಸ್ಥಾನದಲ್ಲಿ ಉಪಾಯ ಮಾಡಲು ಆವಶ್ಯಕವಾದ ಕೈಗಳ ಮುದ್ರೆ, ನ್ಯಾಸ ಮತ್ತು ನಾಮಜಪ ಇವುಗಳನ್ನೂ ಹೇಗೆ ಹುಡುಕಬೇಕು ಎಂಬುದರ ಅಧ್ಯಾತ್ಮಶಾಸ್ತ್ರೀಯ ವಿವೇಚನೆಯನ್ನು ಪ್ರಸ್ತುತ ಗ್ರಂಥದಲ್ಲಿ ಮಾಡಲಾಗಿದೆ.

## ಅಧಿಕ ಪರಿಪೂರ್ಣ ಉಪಾಯಪದ್ಧತಿ !

ವ್ಯಕ್ತಿಗೆ ತೊಂದರೆ ಕೊಡುವ ಕೆಟ್ಟ ಶಕ್ತಿಗಳು ವ್ಯಕ್ತಿಯಲ್ಲಿನ ರೋಗದ ಮೂಲ ಸ್ಥಾನವನ್ನು ಆಗಾಗ ಬದಲಾಯಿಸುತ್ತಿರುತ್ತವೆ. ಇಂತಹ ಸಮಯದಲ್ಲಿ ಬಿಂದುಒತ್ತಡ ಇತ್ಯಾದಿ ಉಪಾಯಪದ್ಧತಿಗಳಲ್ಲಿ ಹೇಳಲಾದ ರೋಗಕ್ಕೆ ಸಂಬಂಧಿಸಿದ ಬಿಂದು ಗಳನ್ನು ಒತ್ತಿ ಯೋಗ್ಯ ಉಪಾಯ ಮಾಡಲು ಸಾಧ್ಯವಾಗುವುದಿಲ್ಲ. ಪ್ರಾಣಶಕ್ತಿವಹನ

ವ್ಯೂಹದ ಉಪಾಯಪದ್ಧತಿಯಲ್ಲಿ ಪ್ರತಿಯೊಂದು ಸಲ ಅಡಚಣೆಗಳ ಸ್ಥಾನವನ್ನು ಹುಡುಕುವುದರಿಂದ ಯೋಗ್ಯ ಉಪಾಯ ಮಾಡಲು ಸಾಧ್ಯವಾಗುತ್ತದೆ.

## ಅಧಿಕ ಸ್ವಾವಲಂಬಿ ಉಪಾಯಪದ್ಧತಿ !

ಮುಂಬರುವ ಭೀಕರ ಆಪತ್ಕಾಲದ ವಿಚಾರ ಮಾಡಿದರೆ ರೋಗನಿವಾರಣೆಗಾಗಿ ಸ್ವಾವಲಂಬಿಗಳಾಗಲು ಬಿಂದುಒತ್ತಡದ ಉಪಾಯ, ಅಂಗೈ ಮತ್ತು ಅಂಗಾಲುಗಳಿಗೆ ಬಿಂದು ಒತ್ತಡ (ರಿಫ್ಲೆಕ್ಸಾಲಜಿ), ಪಿರಮಿಡ್ ಉಪಾಯ, ಆಯಸ್ಕಾಂತೀಯ ಉಪಾಯದಂತಹ ಉಪಾಯಪದ್ಧತಿಗಳು ಮಹತ್ವದ್ದಾಗಿವೆ. ಬಿಂದುಒತ್ತಡ, ಅಂಗೈ ಮತ್ತು ಅಂಗಾಲುಗಳಿಗೆ ಬಿಂದು ಒತ್ತಡ ಇತ್ಯಾದಿ ಉಪಾಯಪದ್ಧತಿಗಳಲ್ಲಿ ಪುಸ್ತಕ ಅಥವಾ ಅರಿತವರ ಸಹಾಯವು ಆವಶ್ಯಕವಾಗಿರುತ್ತದೆ. ಪಿರಮಿಡ್, ಆಯಸ್ಕಾಂತ ಇತ್ಯಾದಿ ಉಪಾಯಪದ್ಧತಿಗಳಲ್ಲಿ ಆಯಾ ಸಾಧನಗಳು ಆವಶ್ಯಕವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಯಾವುದೇ ಸಹಾಯವಿಲ್ಲದೇ ಮತ್ತು ಯಾವುದೇ ಸಾಧನಗಳ ಆವಶ್ಯಕತೆಯಿಲ್ಲದೇ ಪ್ರಾಣಶಕ್ತಿವಹನ ವ್ಯೂಹದ ಉಪಾಯಪದ್ಧತಿಯು ಅತ್ಯಂತ ಸ್ವಾವಲಂಬಿಯಾಗಿದೆ.

## ಉಪಾಯಪದ್ಧತಿಯು ಸೂಕ್ಷ್ಮಸ್ತರದ್ದಾಗಿದ್ದರೂ, ಕಠಿಣವಾಗಿಲ್ಲ !

ಪ್ರಾಣಶಕ್ತಿವಹನ ವ್ಯೂಹ ಉಪಾಯಪದ್ಧತಿಯಲ್ಲಿ ನಮಗಾಗುವ ರೋಗಗಳ ಮೇಲೆ ಸ್ವತಃ ನಾವೇ ಉಪಾಯಗಳನ್ನು ಹುಡುಕುವುದು ಸೂಕ್ಷ್ಮ ಸ್ತರದಲ್ಲಿನ ವಿಷಯ ವಾಗಿರುವುದರಿಂದ, ವಿಶೇಷವಾಗಿ ಸಾಧನೆಯನ್ನು ಮಾಡದಿರುವವರ ಮನಸ್ಸಿನಲ್ಲಿ 'ಇದು ನಮಗೆ ಸಾಧ್ಯವಾಗುವುದೇ' ಎಂಬ ಸಂದೇಹ ನಿರ್ಮಾಣವಾಗಬಹುದು; ಆದರೆ ಈ ಸಂದೇಹ ಯೋಗ್ಯವಲ್ಲ. ನಾವು ಗೋವಾದ ರಾಮನಾಥಿಯಲ್ಲಿನ ಸನಾತನ ಆಶ್ರಮಕ್ಕೆ ಭೇಟಿ ನೀಡಿದ ಅನೇಕ ಜನರಿಂದ ಈ ಉಪಾಯಪದ್ಧತಿಯ ಸಂದರ್ಭದಲ್ಲಿ ಪ್ರಯೋಗಗಳನ್ನು ಮಾಡಿಸಿಕೊಂಡಾಗ ಅವರು ಈ ಪ್ರಯೋಗದಲ್ಲಿ ಸರಿಯಾದ ಉತ್ತರ ಗಳನ್ನು ನೀಡಿದರು. ಉಪಾಯಪದ್ಧತಿಯು ಸೂಕ್ಷ್ಮಸ್ತರದ್ದಾಗಿದ್ದರೂ, ಅದು ಕಠಿಣ ವಾಗಿಲ್ಲ ! ಈ ಉಪಾಯಪದ್ಧತಿಯ ರೂಢಿಯನ್ನು ಮಾಡುವುದು ಆವಶ್ಯಕವಾಗಿದೆ. ಒಮ್ಮೆ ರೂಢಿಯಾಯಿತೆಂದರೆ ಈ ಉಪಾಯಪದ್ಧತಿಗನುಸಾರ ಉಪಾಯವನ್ನು ಹುಡುಕಲು ಸಹಜವಾಗಿ ಸಾಧ್ಯವಾಗುವುದು. ಅದಕ್ಕಾಗಿ ಈಗಿನಿಂದಲೇ ರೂಢಿಯನ್ನು ಮಾಡಿದರೆ ಮುಂಬರುವ ಭೀಕರ ಆಪತ್ಕಾಲದಲ್ಲಿ ವ್ಯಾಧಿಗಳನ್ನು ಎದುರಿಸಲು ನಾವು ಸಕ್ಷಮ ರಾಗುವೆವು ಮತ್ತು ಇತರರನ್ನೂ ಸಕ್ಷಮಗೊಳಿಸಬಹುದು.

**ದೂರದಲ್ಲಿರುವ ರೋಗಿಗಳ ಮೇಲೆ ಉಪಾಯ ಮಾಡಲೂ ಉಪಯುಕ್ತ !**

ಈ ಉಪಾಯಪದ್ಧತಿಯಿಂದ ತಮಗೆ ತಾವೇ ಉಪಾಯವನ್ನು ಹುಡುಕಬಹುದು; ಅಷ್ಟೇ ಅಲ್ಲದೇ ಸಂತರಿಗೆ ಅಥವಾ ಸಮಷ್ಟಿ ಭಾವವಿರುವ ವ್ಯಕ್ತಿಗಳಿಗೆ ಯಾವುದಾದರೊಬ್ಬ ರೋಗಿಯು ದೂರದಲ್ಲಿದ್ದರೂ, ಅಂದರೆ ವಿದೇಶದಲ್ಲಿದ್ದರೂ ಅವನಿಗೋಸ್ಕರವೂ ಉಪಾಯ ಹುಡುಕಬಹುದು !

ಪ್ರಾಣಶಕ್ತಿವಹನ ವ್ಯೂಹದಲ್ಲಿನ ಅಡಚಣೆಗಳನ್ನು ಹುಡುಕಿದ ನಂತರ, ಆ ಸ್ಥಾನದಲ್ಲಿ ಪ್ರತ್ಯಕ್ಷ ಉಪಾಯ ಹೇಗೆ ಮಾಡಬೇಕು ಎಂಬುದರ ಅಧ್ಯಾತ್ಮಶಾಸ್ತ್ರೀಯ ವಿವೇಚನೆಯನ್ನು ಸನಾತನದ 'ಪ್ರಾಣಶಕ್ತಿವಹನ ವ್ಯೂಹದಲ್ಲಿನ ಅಡಚಣೆಗಳಿಂದಾಗುವ ರೋಗಗಳಿಗೆ ಮಾಡಬೇಕಾದ ಉಪಾಯ' ಎಂಬ ಗ್ರಂಥದಲ್ಲಿ ಮಾಡಲಾಗಿದೆ.

'ಈ ಉಪಾಯಪದ್ಧತಿಯನ್ನು ಕಲಿತು ರೋಗನಿವಾರಣೆಯ ಸಂದರ್ಭದಲ್ಲಿ ಎಲ್ಲರಿಗೂ ಸ್ವಾವಲಂಬಿ ಮತ್ತು ಸಕ್ಷಮರಾಗಲು ಸಾಧ್ಯವಾಗಲಿ' ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ !'

**– ಡಾ. ಜಯಂತ ಆಠವಲೆ (೨೪.೯.೨೦೧೫), ಸಂಕಲನಕಾರರು**

## ಸನಾತನದ ಇಬ್ಬರೂ ಸದ್ಗುರುಗಳ ಹೆಸರಿಗೆ ವಿಶಿಷ್ಟ ಆಧ್ಯಾತ್ಮಿಕ ಬಿರುದು ಸೇರಿಸಿರುವುದರ ಹಿಂದಿನ ಕಾರಣ

ನಾಡಿಪಟ್ಟಿವಾಚನದ ಮಾಧ್ಯಮದಿಂದ ಸಪ್ತರ್ಷಿಗಳ ಆಜ್ಞೆಗನುಸಾರ ೧೩.೫.೨೦೨೦ ರಿಂದ ಸದ್ಗುರು (ಸೌ.) ಬಿಂದಾ ನೀಲೇಶ ಸಿಂಗಬಾಳರನ್ನು 'ಶ್ರೀಸತ್‌ಶಕ್ತಿ (ಸೌ.) ಬಿಂದಾ ನೀಲೇಶ ಸಿಂಗಬಾಳ' ಮತ್ತು ಸದ್ಗುರು (ಸೌ.) ಅಂಜಲಿ ಮುಕುಲ ಗಾಡಗೀಳರನ್ನು 'ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಮುಕುಲ ಗಾಡಗೀಳ' ಎಂದು ಸಂಬೋಧಿಸಲಾಗುತ್ತಿದೆ. ಈ ಇಬ್ಬರೂ ಸಂತರು ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರ ಆಧ್ಯಾತ್ಮಿಕ ಉತ್ತರಾಧಿಕಾರಿಗಳಾಗಿದ್ದಾರೆ.

**ವಾಚಕರಿಗೆ ಸೂಚನೆ !**

'ಈ ಗ್ರಂಥದಲ್ಲಿನ ಸೂಕ್ಷ್ಮ ಪರೀಕ್ಷಣೆ, ಸೂಕ್ಷ್ಮಜ್ಞಾನದ ಚಿತ್ರಗಳನ್ನು 'ಮಹರ್ಷಿ ಅಧ್ಯಾತ್ಮ ವಿಶ್ವವಿದ್ಯಾಲಯ'ದ ಸೌಜನ್ಯದಿಂದ ತೆಗೆದುಕೊಳ್ಳಲಾಗಿದೆ.' – **ಪ್ರಕಾಶಕರು**